ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/10/ಇತರೆ/2023-24

ದಿನಾಂಕ: 02.01.2024.

ಇವರಿಗೆ,
ರಾಜ್ಯದ ಎಲ್ಲಾ ಪ್ರಾಂಶುಪಾಲರುಗಳಿಗೆ,

ಮಾನ್ಯರೇ,

**ವಿಷಯ:** ಬೆಂಗಳೂರಿನಲ್ಲಿ ಆಯೋಜಿಸಲಾಗುವ "ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2024" – ಮೇಳದಲ್ಲಿ ಪಾಲ್ಗೊಳ್ಳುವ ಬಗ್ಗೆ.

**ಉಲ್ಲೇಖ:** ಕೃಷಿ ಆಯುಕ್ತರು, ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು, ರವರ ಪತ್ರ ಸಂಖ್ಯೆ:ಉಕೃನಿ/ಸಾಕೃಘ/ಐಟಿಎಫ್-24/2023-24 ದಿನಾಂಕ:28.12.2023.

* * * * * *

ರಾಜ್ಯದ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಹಾಗೂ ಗ್ರಾಹಕರಲ್ಲಿ ಅರಿವು ಮೂಡಿಸುವ ಮುಖ್ಯ ಉದ್ದೇಶಗಳೊಂದಿಗೆ ಬೆಂಗಳೂರಿನ ತ್ರಿಪುರವಾಸಿನಿ, ಅರಮನೆ ಮೈದಾನದಲ್ಲಿ ದಿನಾಂಕ:05.01.2024 ರಿಂದ 07.01.2024 ರವರೆವಿಗೂ "ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2024" ಅನ್ನು ಆಯೋಜಿಸಲಾಗುತ್ತಿದೆ. ಸದರಿ ಮೇಳವು ಗುಣಮಟ್ಟದ ವಸ್ತುಪ್ರದರ್ಶನಗಳು, ಅಂತರರಾಷ್ಟ್ರೀಯ ಸಮ್ಮೇಳನ, ಉತ್ಪಾದಕರ – ಮಾರುಕಟ್ಟೆದಾರರ ಸಭೆಗಳು, ರೈತರ ಕಾರ್ಯಾಗಾರ, ಸಾವಯವ ಆಹಾರ ಮಳಿಗೆಗಳು, ಬಳಕೆದಾರರೊಂದಿಗೆ ಸಂಪರ್ಕ ಈ ಮುಂತಾದ ಕಾರ್ಯಕ್ರಮಗಳನ್ನು ಒಳಗೊಂಡಿದ್ದು, ರಾಜ್ಯದ ಸಿರಿಧಾನ್ಯ ಮತ್ತು ಸಾವಯವ ಕೃಷಿಯ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿರುತ್ತದೆ ಎಂಬುದಾಗಿ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಸದರಿ ವಾಣಿಜ್ಯ ಮೇಳಕ್ಕೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಕ್ಷೇತ್ರಗಳ ವಿವಿಧ ಪಾಲುದಾರರು, ರಾಜ್ಯದ ಎಲ್ಲಾ ಜಿಲ್ಲೆಗಳ ಸುಮಾರು ಹತ್ತು ಸಾವಿರ ರೈತರುಗಳು ಹಾಗೂ ಎರಡು ಲಕ್ಷಕ್ಕೂ ಅಧಿಕ ಬಳಕೆದಾರರು ಭೇಟಿ ನೀಡಲಿದ್ದಾರೆ. ಸದರಿ ಮೇಳವು ಕೃಷಿಕರು - ಗ್ರಾಹಕರು ಪರಿಸರ ಎಲ್ಲರಿಗೂ ಉಪಯುಕ್ತವಾದ ಕಾರ್ಯಕ್ರಮವಾಗಿರುವುದರಿಂದ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳು ಈ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಲು ಅನುವಾಗುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ಅಡಕ: ವಾಣಿಜ್ಯ ಮೇಳದ ಪ್ರತಿ

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

<u>ಇವರಿಗೆ : ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ :</u>

1. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ – ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಅನುದಾನಿತ ಕಾಲೇಜುಗಳಿಗೆ ರವಾನಿಸಲು ಸೂಚಿಸಲಾಗಿದೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
4. ಆಯುಕ್ತರ, ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಹೆಚ್ಚುವರಿ ನಿರ್ದೇಶಕರA ಹಾಗೂ ಜಂಟಿ

**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂ:ಉಕೃನಿ/ಸಾಕೃಫ/ITF-24/2023-24

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ: 28-12-2023

483
29.12.2023

ರವರಿಗೆ,

ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು -01

ಮಾನ್ಯರೇ,

**ವಿಷಯ:** ಬೆಂಗಳೂರಿನಲ್ಲಿ ಆಯೋಜಿಸಲಾಗುವ "ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2024" - ಮೇಳದಲ್ಲಿ ಪಾಲ್ಗೊಳ್ಳುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ರಾಜ್ಯದ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಹಾಗೂ ಗ್ರಾಹಕರಲ್ಲಿ ಅರಿವು ಮೂಡಿಸುವ ಮುಖ್ಯ ಉದ್ದೇಶಗಳೊಂದಿಗೆ **ಬೆಂಗಳೂರಿನ ತ್ರಿಪುರವಾಸಿನಿ, ಅರಮನೆ ಮೈದಾನದಲ್ಲಿ ದಿನಾಂಕ:05.01.2024 ರಿಂದ 07.01.2024 ರವರೆವಿಗೂ "ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ-2024"** ಅನ್ನು ಆಯೋಜಿಸಲಾಗುತ್ತಿದೆ. ಸದರಿ ಮೇಳವು ಗುಣಮಟ್ಟದ ವಸ್ತುಪ್ರದರ್ಶನಗಳು, ಅಂತರರಾಷ್ಟ್ರೀಯ ಸಮ್ಮೇಳನ, ಉತ್ಪಾದಕರ - ಮಾರುಕಟ್ಟೆದಾರರ ಸಭೆಗಳು, ರೈತರ ಕಾರ್ಯಾಗಾರ, ಸಾವಯವ ಆಹಾರ ಮಳಿಗೆಗಳು, ಬಳಕೆದಾರರೊಂದಿಗೆ ಸಂಪರ್ಕ ಈ ಮುಂತಾದ ಕಾರ್ಯಕ್ರಮಗಳನ್ನು ಒಳಗೊಂಡಿದ್ದು, ರಾಜ್ಯದ ಸಿರಿಧಾನ್ಯ ಮತ್ತು ಸಾವಯವ ಕೃಷಿಯ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

ವಾಣಿಜ್ಯ ಮೇಳಕ್ಕೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಕ್ಷೇತ್ರಗಳ ವಿವಿಧ ಪಾಲುದಾರರು, ರಾಜ್ಯದ ಎಲ್ಲಾ ಜಿಲ್ಲೆಗಳ ಸುಮಾರು ಹತ್ತು ಸಾವಿರ ರೈತರುಗಳು ಹಾಗೂ ಎರಡು ಲಕ್ಷಕ್ಕೂ ಅಧಿಕ ಬಳಕೆದಾರರು ಭೇಟಿ ನೀಡಲಿದ್ದಾರೆ. ಸದರಿ ಮೇಳವು ಕೃಷಿಕರು-ಗ್ರಾಹಕರು ಪರಿಸರ ಎಲ್ಲರಿಗೂ ಉಪಯುಕ್ತವಾದ ಕಾರ್ಯಕ್ರಮವಾಗಿರುತ್ತದೆ. ಈ ಮೇಳಕ್ಕೆ ತಮ್ಮನ್ನು ಆಹ್ವಾನಿಸುತ್ತಾ, ತಮ್ಮ ಅಧೀನದಲ್ಲಿ ಬರುವ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ಮೇಳದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳುವ ನಿಟ್ಟಿನಲ್ಲಿ ಸಂಬಂಧಿಸಿದವರಿಗೆ ಮಾಹಿತಿ ನೀಡಲು ತಮ್ಮಲ್ಲಿ ಕೋರಿದೆ.

29/12/23

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,
(ಸಹಿ)
ಕೃಷಿ ಆಯುಕ್ತರು

10.30 p.m
29.12.2023

G:\2023-24\ITF 2024\Karnataka pavilion\Karnataka pavelion.docx

Academic Section
4.15 PM
29/12/23

## ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2024ರ ವೇಳಾಪಟ್ಟಿ

(ತಾತ್ಕಾಲಿಕ)

| ದಿನ 1- ಶುಕ್ರವಾರ 05 ಜನವರಿ 2024 | | | |
|---|---|---|---|
| ಕ್ರ.ಸಂ | ವಿವರ | ಸಮಯ | ಕಾರ್ಯಕ್ರಮ |
| I | ಮುಖ್ಯ ಉದ್ಘಾಟನಾ ಕಾರ್ಯಕ್ರಮ | 10.00 - 11.30 AM | ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಿಂದ ITF - 2024 ರ ಉದ್ಘಾಟನಾ ಕಾರ್ಯಕ್ರಮ |
| II | ವಸ್ತು ಪ್ರದರ್ಶನ | 11.30 AM - 7.00 PM | ಮಳಿಗೆಗಳ ಉದ್ಘಾಟನೆ |
| III | ಅಂತರರಾಷ್ಟ್ರೀಯ ಸಮ್ಮೇಳನ | 12.00 PM -1.00 PM | ಸಮ್ಮೇಳನ ನೋಂದಣಿ |
| | | 2.00 PM -3.30 PM | ಸಮ್ಮೇಳನದ ಉದ್ಘಾಟನೆ & ಅಧಿವೇಶನ 1 |
| | | 3.30 PM -5.00 PM | ಅಧಿವೇಶನ 2 |
| IV | ಮುಖ್ಯ ಸಭಾಂಗಣ - ರೈತರ ಕಾರ್ಯಾಗಾರ | 2.00 PM-5.00 PM | ಕಾರ್ಯಾಗಾರದ ಉದ್ಘಾಟನೆ & ಅಧಿವೇಶನಗಳು - ಕೃಷಿ ವಿಶ್ವವಿದ್ಯಾಲಯ / ಕೃಷಿ ಇಲಾಖೆ |
| V | ಬಿ2ಬಿ ಮತ್ತು ಎಫ್ 2ಬಿ ಬಿ2ಬಿ ಲಾಂಜ್ | 12.30 PM - 1.00 PM | ಬಿ2ಬಿ ಲಾಂಜ್ ಉದ್ಘಾಟನೆ |
| | | 2.00 PM - 6.00 PM | ಬಿ2ಬಿ ಮತ್ತು ಎಫ್2ಬಿ ಅಧಿವೇಶನಗಳು |

| ದಿನ 2- ಶನಿವಾರ 06 ಜನವರಿ 2024 | | | |
|---|---|---|---|
| ಕ್ರ.ಸಂ | ವಿವರ | ಸಮಯ | ಕಾರ್ಯಕ್ರಮ |
| I | ವಸ್ತು ಪ್ರದರ್ಶನ | 10.00 AM - 7.00 PM | ವಸ್ತು ಪ್ರದರ್ಶನ ಮುಂದುವರಿಯುತ್ತದೆ |
| II | ಅಂತರರಾಷ್ಟ್ರೀಯ ಸಮ್ಮೇಳನ | 10.00 AM - 11.30 AM | ಅಧಿವೇಶನ 1 |
| | | 11.30 AM - 1.00 PM | ಅಧಿವೇಶನ 2 |
| | | 2.00 PM – 3.30 PM | ಅಧಿವೇಶನ 3 |
| | | 3.30 PM - 5.00 PM | ಅಧಿವೇಶನ 4 |
| III | ಮುಖ್ಯ ಸಭಾಂಗಣ- ರೈತರ ಕಾರ್ಯಾಗಾರ | 10.00 AM - 5.00 PM | ಕೃಷಿ ವಿಶ್ವವಿದ್ಯಾಲಯ / ಕೃಷಿ ಇಲಾಖೆ |
| IV | B2B ಮತ್ತು F2B B2B ಲೌಂಜ್ | 10.30 AM - 6.00 PM | B2B ಮತ್ತು F2B ಅಧಿವೇಶನಗಳು |

| ದಿನ 3- ಭಾನುವಾರ 07 ಜನವರಿ 2024 | | | |
|---|---|---|---|
| ಕ್ರ.ಸಂ | ವಿವರ | ಸಮಯ | ಕಾರ್ಯಕ್ರಮ |
| I | ವಸ್ತು ಪ್ರದರ್ಶನ | 10.00 AM - 7.00 PM | ವಸ್ತು ಪ್ರದರ್ಶನ ಮುಂದುವರಿಯುತ್ತದೆ |
| II | ಅಂತರಾಷ್ಟ್ರೀಯ ಸಮ್ಮೇಳನ | 10.00 AM - 11.30AM | ಅಧಿವೇಶನ 1 |
| | | 11.30 AM - 1.00 PM | ಅಧಿವೇಶನ 2 |
| III | ಮುಖ್ಯ ಸಭಾಂಗಣ- ರೈತರ ಕಾರ್ಯಾಗಾರ | 10.00 AM - 1.00 PM | ಕೃಷಿ ವಿಶ್ವವಿದ್ಯಾಲಯ / ಕೃಷಿ ಇಲಾಖೆ |
| IV | B2B ಮತ್ತು F2B B2B ಲೌಂಜ್ | 10.00 AM - 3.00 PM | B2B ಮತ್ತು F2B ಅಧಿವೇಶನಗಳು |
| V | ಸಮಾರೋಪ ಸಮಾರಂಭ- ಮುಖ್ಯ ಸಭಾಂಗಣ | 4.00 PM -5.30 PM | ಪ್ರಶಸ್ತಿಗಳ ವಿತರಣೆ |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಸಾವಯವ ಕೃಷಿ ಘಟಕ
ಕರ್ನಾಟಕ ರಾಜ್ಯ ಕೃಷಿ ಇಲಾಖೆ
ಸಂಖ್ಯೆ1, ಶೇಷಾದ್ರಿ ರಸ್ತೆ, ಬೆಂಗಳೂರು-560001
ಫೋ: 080-22074111 / 22242746 / 22074101
ಮಿಂಚಂಚೆ: organiccell@gmail.com

ಮಳಿಗೆಗಳನ್ನು ಕಾಯ್ದಿರಿಸಲು ಅನಿತಾ, ಇಂಟರ್ ನ್ಯಾಷನಲ್ ಕಾಂಪಿಟೆನ್ಸ್ ಸೆಂಟರ್ ಫಾರ್ ಆರ್ಗಾನಿಕ್ ಅಗ್ರಿಕಲ್ಚರ್ ಮೊಬೈಲ್
ಸಂಖ್ಯೆ: 9902745413


ವಿವರಗಳಿಗಾಗಿ ಸಂಪರ್ಕಿಸಿ : www.organics-millets.in



ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



# ಸಿರಿಧಾನ್ಯ ಮತ್ತು ಸಾವಯವ


ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2024

ಜನವರಿ 5 ರಿಂದ 7 , ತ್ರಿಪುರವಾಸಿನಿ
ಅರಮನೆ ಮೈದಾನ, ಬೆಂಗಳೂರು
www.organics-millets.in

## ಸಿರಿಧಾನ್ಯ ಮತ್ತು ಸಾವಯವ:


## ಪರಂಪರೆಯ ಕೃಷಿ, ಭವಿಷ್ಯದ ಪೋಷಣೆ

# ಪ್ರತಿ ಧಾನ್ಯದಲ್ಲೂ ಉತ್ಕೃಷ್ಟತೆ



# ಸಿರಿಧಾನ್ಯ ಮತ್ತು ಸಾವಯವ:

## ಪರಂಪರೆಯ ಕೃಷಿ, ಭವಿಷ್ಯದ ಪೋಷಣೆ




ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2024ರ ಐದನೇ ಆವೃತ್ತಿಯನ್ನು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯಿಂದ ಆಯೋಜಿಸಲಾಗಿದೆ. ಈ ಮೇಳವು ಕೃಷಿ, ತೋಟಗಾರಿಕೆ, ಸಂಸ್ಕರಣೆ, ಯಂತ್ರೋಪಕರಣಗಳು ಮತ್ತು ಕೃಷಿ ತಾಂತ್ರಿಕತೆಗೆ ಸಂಬಂಧಿಸಿದಂತೆ ರೈತರು, ರೈತ ಗುಂಪುಗಳು, ದೇಶೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು, ಸಾವಯವ ಮತ್ತು ಸಿರಿಧಾನ್ಯ ವಲಯದ ಕೇಂದ್ರ ಮತ್ತು ರಾಜ್ಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅವಕಾಶಗಳನ್ನು ಕಲ್ಪಿಸುವ ವೇದಿಕೆಯಾಗಿದೆ.

ಸಾವಯವ ಮತ್ತು ಸಿರಿಧಾನ್ಯಗಳನ್ನು "ಭವಿಷ್ಯದ ಪೀಳಿಗೆಯನ್ನು ಪೋಷಿಸುವ ಸಾಂಪ್ರದಾಯಿಕ ಪ್ರಜ್ಞಾವಂತ ಆಹಾರ" ಎಂದು ಜನಪ್ರಿಯಗೊಳಿಸುವುದು ರಾಜ್ಯ ಸರ್ಕಾರದ ಧ್ಯೇಯೋದ್ದೇಶವಾಗಿದೆ.

## ಕರ್ನಾಟಕದ ಪಯಣ

### ಸಾವಯವ

- ಕರ್ನಾಟಕ ಸರ್ಕಾರವು ಸುಮಾರು 2 ದಶಕಗಳಿಂದ ಸಾವಯವ ಕೃಷಿಯನ್ನು ಉತ್ತಮ ಪರ್ಯಾಯ ಪದ್ಧತಿಯಾಗಿ ಉತ್ತೇಜಿಸುತ್ತಿದೆ.
- ಸ್ವಾವಲಂಬನೆ, ಗ್ರಾಮೀಣಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗೆ ಒತ್ತು ನೀಡಲು 2004 ರಲ್ಲಿ ಪ್ರತ್ಯೇಕ ಸಾವಯವ ಕೃಷಿ ನೀತಿಯನ್ನು ಹೊರತರಲಾಗಿದೆ.
- ಸಿರಿಧಾನ್ಯ ಮತ್ತು ಮಾರುಕಟ್ಟೆ ಸಂಪರ್ಕಗಳಿಗೆ ಹೆಚ್ಚಿನ ಒತ್ತು ನೀಡಿ 2017ರಲ್ಲಿ ಪರಿಷ್ಕೃತ ಸಾವಯವ ನೀತಿಯನ್ನು ಹೊರತರಲಾಗಿದೆ.

### ಸಿರಿಧಾನ್ಯ

ರಾಜ್ಯ ಸರ್ಕಾರವು ಸಾಂಪ್ರದಾಯಿಕ ಮತ್ತು ಸಾವಯವ ಪದ್ಧತಿಯಲ್ಲಿ ಬೆಳೆದ ಸಿರಿಧಾನ್ಯಗಳನ್ನು ಈ ಕೆಳಕಂಡ ಪ್ರಮುಖ ಮೂರು ಉದ್ದೇಶಗಳೊಂದಿಗೆ "ಪ್ರಜ್ಞಾವಂತ ಆಹಾರ" ವಾಗಿ ಉತ್ತೇಜಿಸುತ್ತಿದೆ.

» ರೈತರಿಗೆ ಲಾಭದಾಯಕ
» ಗ್ರಾಹಕರಿಗೆ ಉತ್ತಮ
» ಪರಿಸರಕ್ಕೆ ಒಳ್ಳೆಯದು

### ಮೇಳದ ಮುಖ್ಯಾಂಶಗಳು

- 300+ ಹವಾನಿಯಂತ್ರಿತ ಮಳಿಗೆಗಳು
- 1,00,000 ಚದರ ಅಡಿ ಮೀಸಲು
- ಸಿರಿಧಾನ್ಯ ಮತ್ತು ಸಾವಯವ ಆಹಾರ ಮಳಿಗೆಗಳು
- ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಹಾಗೂ ಸಮ್ಮೇಳನ
- ಉತ್ಪಾದಕರು ಮತ್ತು ಮಾರುಕಟ್ಟೆದಾರರ ಸಭೆ(ಬಿ2ಬಿ)ಗಳು
- ಗ್ರಾಹಕರ ಸಂಪರ್ಕ
- ರೈತರ ಕಾರ್ಯಾಗಾರಗಳು
- ಸಾಂಸ್ಕೃತಿಕ ಕಾರ್ಯಕ್ರಮಗಳು

### ನಿರೀಕ್ಷಿತ ಸಂದರ್ಶಕರು

- ಸಾವಯವ ಮತ್ತು ನೈಸರ್ಗಿಕ ಉತ್ಪಾದಕರು
- ಸಗಟು ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ಸ್ವ-ಸಹಾಯ ಗುಂಪುಗಳು
- ರಫ್ತುದಾರರು ಮತ್ತು ಆಮದುದಾರರು
- ಉಪಹಾರ ಗೃಹಗಳು ಮತ್ತು ಆಹಾರ ಪೂರೈಕೆದಾರರು
- ಶಿಕ್ಷಣ ತಜ್ಞರು, ಸಂಶೋಧಕರು, ಪರಿಣಿತರು
- ಆಹಾರ ಉತ್ಪಾದಕರು ಮತ್ತು ಸಂಸ್ಕರಣಾದಾರರು
- ಸೇವಾ ಸಂಸ್ಥೆಗಳು
- ವಿದ್ಯಾರ್ಥಿಗಳು, ಪೌಷ್ಟಿಕ ತಜ್ಞರು, ಗ್ರಾಹಕರು

### ಪ್ರದರ್ಶಿಸಲಾಗುವ ಉತ್ಪನ್ನಗಳು

- ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಉತ್ಪನ್ನಗಳು
  » ಸಾಂಬಾರು ಪದಾರ್ಥಗಳು ಮತ್ತು ಗಿಡಮೂಲಿಕೆಗಳು
  » ತಾಜಾ ಹಣ್ಣುಗಳು ಮತ್ತು ತರಕಾರಿಗಳು
  » ಕಾಳು, ಡ್ರೈಫ್ರೂಟ್ಸ್ ಮತ್ತು ತೆಂಗಿನಕಾಯಿ
  » ಸಾವಯವ ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು
- ಪ್ರಮಾಣೀಕೃತ ಅರಣ್ಯ ಉತ್ಪನ್ನಗಳು
- ದೇಸಿ ಜಾನುವಾರು ಉತ್ಪನ್ನಗಳು - ಹೈನುಗಾರಿಕೆ, ಕೋಳಿ ಸಾಗಾಣಿಕೆ ಮತ್ತು ಜೇನುತುಪ್ಪ
- ದೇಸಿ ಜವಳಿ, ಸೌಂದರ್ಯವರ್ಧಕಗಳು, ವೈಯಕ್ತಿಕ ಆರೈಕೆ ವಸ್ತುಗಳು
- ಸಿರಿಧಾನ್ಯ ಸಂಸ್ಕರಣೆ ಯಂತ್ರೋಪಕರಣಗಳು
- ಪರಿಸರ ಸ್ನೇಹಿ ಉತ್ಪನ್ನಗಳು

